

ಭವ್ಯ ಎಚ್.ಸಿ. ನವೀನ್
ಕಲೆ: ರೂಪಶ್ರೀ ಕಲ್ಲಿಗನೂರು

# ಕಳುವಾದ ಸಂಗತಿಗಳು...

ಸದಾ ಮುತ್ತುಗಳೇ ಕಳೆಯುವುದಿಲ್ಲ
ಒಮ್ಮೊಮ್ಮೆ ಕಳೆಯುತ್ತವೆ
ಸವೆದಿಟ್ಟ ಹುಣಸೇಬೀಜ
ಸೆಟ್ಟಾಟದ ಬಳೆಚೂರು
ಕಳೆಯುತ್ತವೆ ಜತೆ..
ಪುಟಾಣಿಹೆಜ್ಜೆ
ಕಳೆದು ಹೋಗುತ್ತವೆ
ಮೈಲಿಗೆಯಿಲ್ಲದ ನಗೆ
ಮುಜುಗರವಿಲ್ಲದ ಅಳು

ಕಳೆಯುತ್ತವೆ
ಕುಂಟೆಬಿಲ್ಲೆ ಮನೆ
ಗಿರಿಗಿಟ್ಲೆ ಆಕಾಶ
ಹೌದು
ಕಳೆದೇಹೋಗುತ್ತಾಳೆ
ರತ್ತೋ ರತ್ತೋ ಆಟದ ಬಸವಿ
ಗೊಂಬೆ ಮದುವೆಯ ಮದುವಣಗಿತ್ತಿ



ಸದಾ ರೂಪಾಯಿಗಳೇ ಮುಗಿಯುವುದಿಲ್ಲ
ಆಗಾಗ ಮುಗಿಯುತ್ತವೆ
ಹಸಿರು.. ನೀಲಿ ಗೋಲಿ
ಶುಂಠಿ ಪೆಪ್ಪರ್ಮೆಂಟು
ಮುಗಿಯುತ್ತವೆ
ಚಿತ್ರ ಪುಸ್ತಕದ ಹಾಳೆ
ದಿನಕ್ಕೊಂದು ಕತೆ
ಮುಗಿದು ಹೋಗುತ್ತವೆ
ಕರಾರಿಲ್ಲದ ಪ್ರೀತಿ
ತಕರಾರಿಲ್ಲದ ಮುನಿಸು